ವಿವರವಾದ ಅಂದಾಜು ವೆಚ್ಚವನ್ನು ವಾಸ್ತುಶಿಲ್ಪಿ ಇಲಾಖೆ ತಯಾರಿಸುತ್ತಿಲ್ಲ. ಕಟ್ಟಡಗಳ ಅಂದಾಜು ವೆಚ್ಚವನ್ನು ಲೋಕೋಪಯೋಗಿ ಇಲಾಖೆಯ ಸಂಬಂಧಿಸಿದ ವಿಬಾಗದಲ್ಲಿಯೇ ತಯಾರಿಸಲಾಗುತ್ತಿದೆ.

ಅ) ಸರ್ಕಾರದ ಎಲ್ಲಾ ಕಟ್ಟಡಗಳ ಕಾಮಗಾರಿಗಳ ನಕ್ಷೆಗಳನ್ನು ವಾಸ್ತುಶಿಲ್ಪಿ ಇಲಾಖೆ ತಯಾರಿಸುತ್ತಿದ್ದು ಪ್ರತಿ ವರ್ಷ ಅಂದಾಜು ವೆಚ್ಚ 100 ರಿಂದ 150 ಕೋಟಿ ರೂ.ಗಳ ನಕ್ಷೆಗಳನ್ನು ತಯಾರಿಸಿ ನೀಡಲಾಗುತ್ತಿದೆ. ಈ ನಕ್ಷೆಗಳ ತಯಾರಿಕೆಯನ್ನು ಪಾಸಗಿಯವರಿಗೆ ನೀಡಿದಲ್ಲಿ 100 ಕೋಟಿಗೆ ಶೇ.2ರಂತೆ 2 ಕೋಟಿ ರೂ.ಗಳ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ವಾಸ್ತುಶಿಲ್ಪಿ ಇಲಾಖೆ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿ ವರ್ಷ ಸರ್ಕಾರವು ವೆಚ್ಚ ಮಾಡುತ್ತಿರುವ ಅಂದಾಜು ವೆಚ್ಚ 60 ರಿಂದ 70 ಲಕ್ಷ ರೂ.ಗಳವರೆಗೆ ಇರುವುದರಿಂದ ಈ ಇಲಾಖೆಯಿಂದ ಸರ್ಕಾರಕ್ಕೆ ಉಳಿತಾಯವೇ ಆಗುತ್ತಿದೆ.

ದೊಡ್ಡಬಳ್ಳಾಪುರ ನಗರ ಪಶುವೈದ್ಯ ಆಸ್ಪತ್ರೆಯ ಕಟ್ಟಡದ ದುರಸ್ತಿ.

2236 (3231) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೊಡ್ಡಬಳ್ಳಾಪುರ ನಗರದ ಸರ್ಕಾರಿ ಪಶುವೈದ್ಯ ಆಸ್ಪತ್ರೆಯ ಕಟ್ಟಡ ಸುಮಾರು 70-80 ವರ್ಷಗಳಷ್ಟು ಹಳೆಯದಾಗಿದ್ದು ಕಟ್ಟಡ ಶಿಥಿಲವಾಗಿ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಎಂದಿನಿಂದ ದುರಸ್ತಿ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಬಂದಿದೆ.

ಆ) ತಾಲ್ಲೂಕು ಪಂಚಾಯತ್ ಹಂತದಲ್ಲಿ ಎಸ್ಟಿಮೇಟನ್ನು ತಯಾರಿಸಿರುವರು.

ಇ) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ತುರುವೇಕೆರೆಯಲ್ಲಿ ದಿವಂಗತ ಟಿ. ಸುಬ್ರಹ್ಮಣ್ಯರವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ.

2239 (2696) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣಯ್ಯ) (ತುರುವೇಕೆರೆ) :— ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನ ತಾಳಕೆರೆ ಗ್ರಾಮವಾಸಿ ದಿವಂಗತ ಟಿ. ಸುಬ್ರಹ್ಮಣ್ಯರವರು ಮಾಜಿ ಮಂತ್ರಿಗಳಾದ ಇವರ ಪ್ರತಿಮೆಯನ್ನು ತುರುವೇಕೆರೆ ನಗರದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ;

ಆ) ತಾಲ್ಲೂಕಿನ ಕಚೇರಿ ಮುಂಭಾಗ ಸುಬ್ರಹ್ಮಣ್ಯರವರ ಪ್ರತಿಮೆ ಸ್ಥಾಪನೆಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ;

ಇ) ಹಾಗಿದಲ್ಲಿ, ಎಷ್ಟು ದಿನಗಳಲ್ಲಿ ಪ್ರತಿಮೆ ಅನಾವರಣ ಮಾಡಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಯಡಿಯೂರು-ತಿಪಟೂರು ಲಿಂಕ್ ರಸ್ತೆ ಹಾಮಗಾರಿಯನ್ನು ಕೇಂದ್ರ ರಸ್ತೆ ನಿಧಿಯಲ್ಲಿ ಪ್ರಾರಂಭಿಸುವುದು.

2240(2697) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣಯ್ಯ) (ತುರುವೇಕೆರೆ) :—
ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಯಡಿಯೂರು-ತಿಪಟೂರು ಲಿಂಕ್ ರಸ್ತೆ ಸಿ.ಆರ್.ಎಫ್‌ನಿಂದ ಮಂಜೂರಾತಿ ಆಗಿರುವುದು ನಿಜವೇ?

ಆ) ಹಾಗಿದಲ್ಲಿ, ಮಂಜೂರಾತಿ ಆಗಿರುವ ಹಣವೆಷ್ಟು; ಹಾಗೂ ಮಾಡಲು ಉದ್ದೇಶಿಸಿರುವ ಕಿಲೋಮೀಟರುಗಳು ಎಷ್ಟು?

ಇ) ಮಂಜೂರಾತಿ ಬಂದಿದ್ದರೆ ಕೆಲಸ ಪ್ರಾರಂಭಿಸಲು ಇರುವ ಕೊರತೆ ಏನು?

ಈ) ಎಷ್ಟು ದಿನಗಳಲ್ಲಿ ಕೆಲಸ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಯಡಿಯೂರು-ತಿಪಟೂರು ರಸ್ತೆಯ ಸುಧಾರಣೆಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆಯಬೇಕಾಗಿದೆ.

ಆ) ಇನ್ನೂ ಮಂಜೂರಾಗಿರುವುದಿಲ್ಲ. ಮಾಡಲು ಉದ್ದೇಶಿಸಿರುವ ರಸ್ತೆ ಉದ್ದ 50 ಕಿ.ಮೀ. (ರಸ್ತೆಯ ಆಯ್ದ ಭಾಗಗಳು)

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ